ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ: ಕ.ರಾ.ಹ.ಸಂ./ಪ್ರ.ಕ./ ಶಿ- 536/20-21
Ref. No. KSFC/H.O./

ದಿನಾಂಕ:
Date 31/08/2020

ಜರೂರು

ಆಂತರಿಕ ಕಛೇರಿ ಟಿಪ್ಪಣಿ - 28

ವಿಷಯ: ಪ್ರಧಾನ ಕಛೇರಿಯ ವರ್ಗಾವಣೆ/ ನಿಯೋಜನೆ ಆದೇಶದನ್ವಯ, ಶಾಖಾ ಕಛೇರಿ/ ಪ್ರ.ಕ. ವಿಭಾಗಗಳಿಂದ ಬಿಡುಗಡೆಗೊಳಿಸಿದ ಹಾಗೂ ವರದಿ ಮಾಡಿಕೊಂಡ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವ ಕುರಿತಂತೆ.

ಉಲ್ಲೇಖ: 1. ಆಂತರಿಕೆ ಕಛೇರಿ ಟಿಪ್ಪಣಿ ಸಂಖ್ಯೆ:ಸಿಬ್ಬಂದಿ/987/2018-19 ದಿ: 19.11.2018.
2. ಆಂತರಿಕೆ ಕಛೇರಿ ಟಿಪ್ಪಣಿ ಸಂಖ್ಯೆ:ಸಿಬ್ಬಂದಿ/384/2018-19 ದಿ: 05.02.2019.

****

ಮೇಲ್ಕಂಡ ವಿಷಯದನ್ವಯ ಸಂಬಂಧಪಟ್ಟಂತೆ ಸಿಬ್ಬಂದಿ ವಿಭಾಗದಿಂದ ಹೊರಡಿಸಿರುವ ಆಂತರಿಕ ಕಛೇರಿ ಟಿಪ್ಪಣಿಗಳಲ್ಲಿ ಉಲ್ಲೇಖಿಸಿದಂತೆ ಸಂಸ್ಥೆಯಲ್ಲಿ ಉದ್ಯೋಗಿಗಳನ್ನು ವರ್ಗಾವಣೆ/ ನಿಯೋಜನೆ/ ವಯೋ ನಿವೃತ್ತಿ/ ಸ್ವಯಂ ನಿವೃತ್ತಿ ಮತ್ತು ಉದ್ಯೋಗಿಗಳು ಸಂಸ್ಥೆಯ ಸೇವೆಯಿಂದ ಬಿಡುಗಡೆಗೊಳಿಸಿರುವ/ ವರದಿ ಮಾಡಿಕೊಂಡಿರುವ ಮಾಹಿತಿಗಳನ್ನು ಆಯಾ ಶಾಖಾ ಕಛೇರಿ/ ಪ್ರಧಾನ ಕಛೇರಿಯ ವಿಭಾಗಗಳಲ್ಲಿಯೇ ದಾಖಲಿಸುವ ಸಂಬಂಧ ಮಾಹಿತಿ ತಂತ್ರಜ್ಞಾನ ವಿಭಾಗದವರು ಒಂದು ಪ್ರೋಗ್ರಾಂ ಬರೆದು ಅದು ಈಗಾಗಲೇ ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವುದು ಮತ್ತು ಶಾಖಾ ವ್ಯವಸ್ಥಾಪಕರು/ ವಿಭಾಗ ಮುಖ್ಯಸ್ಥರಿಗೆ ಮಾಹಿತಿಯನ್ನು ದಾಖಲಿಸಲು ಉಲ್ಲೇಖ (1) ಮತ್ತು (2)ರಲ್ಲಿ ಸೂಚಿಸಲಾಗಿತ್ತು. ಆದರೆ, ಕೆಲವು ಶಾಖಾ ಕಛೇರಿ/ ವಿಭಾಗಗಳಲ್ಲಿ ಮೇಲ್ಕಂಡ ಮಾಹಿತಿಗಳನ್ನು ದಾಖಲಿಸಿರುವುದಿಲ್ಲ ಮತ್ತು ಸಿಬ್ಬಂದಿ ವಿಭಾಗಕ್ಕೂ ಸಹ ಬಿಡುಗಡೆಗೊಳಿಸಿರುವ ಮಾಹಿತಿಯನ್ನು ಕಳುಹಿಸದಿರುವುದು ಕಂಡುಬಂದಿದೆ. ಆದುದರಿಂದ, ಉದ್ಯೋಗಿಗಳು ವರ್ಗಾವಣೆಯಾಗಿ ವರದಿ ಮಾಡಿಕೊಳ್ಳದ ಉದ್ಯೋಗಿಗಳ ಮಾಹಿತಿಯನ್ನು ಮಾಹಿತಿ ತಂತ್ರಜ್ಞಾನದ ರೂಪದಲ್ಲಿ ಪಡೆಯಲು ಸಾಧ್ಯವಾಗುತ್ತಿಲ್ಲ.

ಸಂಸ್ಥೆಯಲ್ಲಿ ವರ್ಗಾವಣೆಗೊಂಡ ಉದ್ಯೋಗಿಗಳನ್ನು ಬಿಡುಗಡೆಗೊಳಿಸಿದ ಮತ್ತು ವರದಿ ಮಾಡಿಕೊಂಡ ಮಾಹಿತಿಗಳನ್ನು ದಾಖಲಿಸಲು ಆಯಾ ವಿಭಾಗದ/ ಶಾಖಾ ಕಛೇರಿಗಳ ಮುಖ್ಯಸ್ಥರುಗಳು ದಾಖಲಿಸುವಂಥೆ ಮೇಲ್ಕಂಡ ಟಿಪ್ಪಣಿಗಳಲ್ಲಿ ಸೂಚಿಸಲಾಗಿದೆ. ಆಯಾ ವಿಭಾಗ ಮತ್ತು ಶಾಖಾ ಕಛೇರಿಗಳಲ್ಲಿ ಬಾಕಿ ಉಳಿದಿರುವ ಮಾಹಿತಿಯನ್ನು <u>ದಿ:11.09.2020</u> ರೊಳಗೆ ಹಾಲಿ ಇರುವ ವಿಭಾಗ/ ಶಾಖಾ ಮುಖ್ಯಸ್ಥರು ನವೀಕರಿಸಿ (update)/ ದಾಖಲಿಸಿ ಪೂರ್ಣಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಗಿದೆ.

31/8/2020
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿ&ಆ)

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಶಾಖಾ ಕಛೇರಿಗಳ ಮುಖ್ಯಸ್ಥರುಗಳಿಗೆ,
ಆ.ಲೆ.ಪ ಕೋಶ, ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರುಗಳು-1 & 2
ವ್ಯ.ನಿ. ರವರ ಕಾ.ನಿ ಸಹಾಯಕರಿಗೆ } ಮಾಹಿತಿಗಾಗಿ
ಹೆಚ್‌ಆರ್‌ಎಂಎಸ್, ಗ್ರಂಥಾಲಯ,
ಸೂಚನಾ ಫಲಕಕ್ಕೆ, ಕಛೇರಿ ಪ್ರತಿ.

ಪ್ರಧಾನ ಕಛೇರಿ: ಕೆ.ಎಸ್.ಎಫ್.ಸಿ ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052
ದೂರವಾಣಿ ಸಂಖ್ಯೆ ಸಾಮಾನ: 22263322 ಫ್ಯಾಕ್ಸ್: 080-22250126 ಇ-ಮೇಲ್: info@ksfc.in ವೆಬ್: www.ksfc.in